## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 690/2022

ಸಾಕ್ಷಿಗೆ ದಿನಾಂಕ 24-01-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 4 P.W.: 4

| | | |
|---|---|---|
| ಹೆಸರು | : | ಸೋಮ್ಲಾನಾಯ್ಕ |
| ತಂದೆಯ ಹೆಸರು | : | ಫಕೀರನಾಯ್ಕ |
| ವಯಸ್ಸು | : | 72 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಕೋಗಳಿ ತಾಂಡ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಆರೋಪಿತರು ನನಗೆ ಗೊತ್ತು ಅವರು ನಮ್ಮ ಊರಿನವರು ಇರುತ್ತಾರೆ. ಆರೋಪಿತರು ಏನು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿಃ26-07-2022 ರಂದು ಸಂಜೆ 5 ಗಂಟೆ ಸುಮಾರಿಗೆ ನಾನು ಸಾರ್ವಜನಿಕ ಗ್ರಂಥಾಲಯದ ಬಳಿ ಹೋದಾಗ ಗ್ರಂಥಾಲಯದ ಬಾಗಿಲನ್ನು ಯಾರೋ ಒಡೆದು ಹಾಕಿದ್ದರು ಆಗ ಬಗ್ಗೆ ನಾನು ಗ್ರಾಮ ಪಂಚಾಯ್ತಿ ಪಿ ಡಿ ಓ ಚಾಸಾ-1 ರವರಿಗೆ ವಿಚಾರ ತಿಳಿಸಿದೆ ಅವರು ಚಾಸಾ-5 ರವರ ಜೊತೆ ಸ್ಥಳಕ್ಕೆ ಬಂದು ನಾವೆಲ್ಲರೂ ಸೇರಿ ಸದರಿ ಗ್ರಂಥಾಲಯದ ಬಳಿ ಹೋಗಿ ನೋಡಲಾಗಿ ಯಾರೋ ಗ್ರಂಥಾಲಯದ ಕಟ್ಟಿಗೆ ಬಾಗಿಲು ಮುರಿದಂತೆ ಕಂಡುಬಂತು ನಾವೆಲ್ಲರೂ ಒಳಗೆ ಹೋಗಿ ನೋಡಲಾಗಿ ಅಲ್ಲಿಟ್ಟಿದ್ದ 15 ಕಬ್ಬಿಣದ ಚೇರುಗಳು ಹಾಗೂ ಗೋಡೆ ಗಡಿಯಾರ ಒಟ್ಟು ರೂ.10 ಸಾವಿರ ಮೌಲ್ಯದ ವಸ್ತುಗಳನ್ನು ಯಾರೋ ಕಳುವು ಮಾಡಿಕೊಂಡು ಹೋಗಿರುತ್ತಾನಂತಾ ವಿಚಾರ ತಿಳಿಯಿತೆಂದರೆ ಸರಿಯಲ್ಲ ಈ ಬಗ್ಗೆ ಚಾಸಾ-1 ರವರು ದಿಃ27-07-2022 ರಂದು ರಾತ್ರಿ 10 ಗಂಟೆಟೆ ಇಟಿಗಿ ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತಾರೆಂದರೆ ಸರಿಯಲ್ಲ. ನಂತರ ಇಟಿಗಿ ಪೋಲೀಸರು ಆರೋಪಿತರನ್ನು ನನಗೆ ತೋರಿಸಿ ಅವರೇ ಸದರಿ ಗ್ರಂಥಾಲಯದಲ್ಲಿ ಕಳ್ಳತನ ಮಾಡಿರುತ್ತಾರೆಂದು ಹೇಳಿರುತ್ತಾರೆ ಸದರಿ ಆರೋಪಿತರನ್ನು ವಿಚಾರಿಸಲಾಗಿ

ಆರೋಪಿತರು ತಾವೇ ಕಳ್ಳತನ ಮಾಡಿರುತ್ತೇವಂತಾ ಪೋಲೀಸರ ಮುಂದೆ ನಮ್ಮ ಸಮಕ್ಷಮ ಒಪ್ಪಿಕೊಂಡಿರುತ್ತಾರೆಂದರೆ ಸರಿಯಲ್ಲ. ಸದರಿ ಚೇರುಗಳನ್ನು ಮತ್ತು ಗಡಿಯಾರವನ್ನು ಪ್ರಾಥಮಿಕ ಶಾಲೆಯ ವಾಟರ್ ಫಿಲ್ಟರ್ ಹತ್ತಿರ ಬಚ್ಚಿಟ್ಟಿರುತ್ತೇವಂತಾ ತಿಳಿಸಿದರೆಂದರೆ ಸರಿಯಲ್ಲ. ಘಟನೆಯ ಕುರಿತು ನಾನು ದಿಃ 28-07-2022 ರಂದು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿತರು ನಿಮ್ಮ ಊರಿನವರಾದ ಕಾರಣ ಆರೋಪಿತರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ